ಭಾಗನೇ...

...ಈ ಹಿನ್ನೆಲಿ ಒಳಗ, 'ಐಡೆಂಟಿಟಿ' ಅಂದ್ರ... ನಾವು ನಮ್ಮ ಜಾತಿ ಹಿನ್ನೆಲೇನ ಬಿಟ್ಟುಕೊಡಬಾರ್ದು ಅನ್ನಾದು, ವಿಶೇಷವಾಗಿ ನಮ್ಮ ದನಿ ನಮ್ಮ ಸಮುದಾಯದವ್ರಿಗೆ ಶಕ್ತಿ ಆಗ್ತದಿ ಅನ್ನೋವಾಗ ಬಿಡಬಾರ್ದು. ಒಂದು ಹಂತದಾಗ ಇದು ನನ್ನ ಕರ್ತವ್ಯ ಅನ್ನಾದು ನನ್ ತಲಿ ಹೊಕ್ತು... ಬಾವಿಯಿಂದ ನೀರು ತಗೊಳ್ಳೋ ಹಕ್ಕು, ಅವಕಾಶ ಇಲ್ದೆ ಬದ್ಕಿದ ನನ್ನ ತಂದೆತಾಯಿಗಳ್ಗೆ, ಅಜ್ಜಅಜ್ಜಿಯೋರ ಪರವಾದ ಕರ್ತವ್ಯ ಇದು. ಇದ್ನ ಮರೀದೆ ಇರೋದು ನನ್ನ ಕರ್ತವ್ಯ. ನಾ ಇದ ಹಾಡ್ಬೇಕು, ಇದ್ನ ಕೇಳೋ ಜನ್ರಿಗೆ ಮುಜುಗರ ಆದ್ರೂ ಪರವಾಗಿಲ್ಲ ನಾ ಹಾಡ್ಬೇಕು...

◆ **ಒಂದು ಕಡೆ ನಾವು ಸಮಾನತೆ ಬರಬೇಕು ಅಂತೀವಿ, ಇನ್ನೊಂದು ಕಡೆ ಪ್ರತಿಯೊಂದು ಜಾತಿಯವ್ರು ಕೂಡ ತಮ್ಮ ಜಾತಿ ಸಂಘಗಳನ್ನ, ಮಠಗಳನ್ನ ದಿನದಿಂದ ದಿನಕ್ಕೆ ಗಟ್ಟಿಗೊಳಿಸ್ತಾ ಇದಾರೆ. ಜಾತಿಯನ್ನು ಜೀವಂತವಾಗಿ ಇಟ್ಕೊಳ್ಳೋ ಕೆಲಸಗಳನ್ನೂ ಮಾಡ್ತಾ, ಜಾತಿ ಹೋಗಬೇಕು ಅಂತಾನೂ ಹೇಳೋದು ಒಂದು ರೀತೀಲಿ ವಿರೋಧಾಭಾಸ ಅನ್ನಿಸಲ್ವ?**

ಜಾತಿ ಹೋಗ್ಬೇಕು ಅಂತ ಹೇಳವ್ರು ಭೇದಭಾವದ ಹಿನ್ನೆಲೆ ಒಳ್ಗ ಹೇಳ್ತಾರೆ ಅನ್ನಸ್ತದ. ಜಾತಿ ಹೋಗಕ್ಕಾಗಲ್ಲ... ಹೋಗಬೇಕು ಅಂದ್ರ, ನಮ್ಮನಮ್ಮ ಪೂರ್ವಜರ ಇತಿಹಾಸನ ಅಳಿಸಿ ಹಾಕ್ಬೇಕು ಅಂತ ಆಯ್ತು, ಟೆಕ್ನಿಕಲಿ, ಅಲ್ವಾ?... ಅದು ಹೆಂಗಾಗ್ತದ? ಈಗ... ನಾನು ಲೆದರ್ ಬಗ್ಗೆ ಯಾಕೆ ಆಸಕ್ತಿ ವಹಿಸ್ತೀನಿ ಅಂದ್ರ, ಲೆದರ್ ಈಗ ಜನಗಳ ಕೈಯಾಗಿಲ್ಲ, ಅದು ಕೈಗಾರಿಕೆ ನಡಸವ್ರ ಕೈಯಾಗದ. ಇದು ಆರ್ಥಿಕ, ರಾಜಕೀಯ ಮತ್ತು ಜಾತಿ ಸಮಸ್ಯೆ. ಮಾದಿಗರಿಗೆ ಚರ್ಮ ಸುಲಭಕ್ಕೆ ಸಿಗ್ತಿತ್ತು, ಹಾಗಾಗೀನೆ ನಾವು ಸಂಗೀತನ ಹಚ್ಕೊಂಡ್ವಿ. ಊರ್ನಾಗ... ಉಳಿದಿದ್ದ ತೊಗಲು ಏನಾಗ್ತಿತ್ತು? ದಮ್ಮಡಿ, ಹಲಗಿ ಆಗ್ತಿದ್ವು, ಚೌಡಿಕಿ ಆಗ್ತಿದ್ವು, ಶ್ರುತಿ ಆಗ್ತಿದ್ವು... ಈಗ ನಾವು ಶ್ರುತಿ ಚೌಡಿಕಿ ತಗೊಬೇಕಂದ್ರ ಮೀರಜ್‌ಗೆ ಹೋಗ್ಬೇಕು, ಅಲ್ಲಿ ಆರ್ಡರ್ ಮಾಡ್ಬೇಕು. ಅವ್ರು ಎಲ್ಲಿಂದೋ ತಂದ ಮರ, ಎಲ್ಲಿಂದೋ ತಂದ ತೊಗಲು ಹಾಕಿ ವಾದ್ಯ ಮಾಡ್ತಾರಾ... ಹಿಂದೆ ಹೆಂಗಿತ್ತು? ಜೋಗತಿರು ಆಗ್ಬೇಕು ಅಂದ್ರ ಒಂದು ಮರದಿಂದ ಎರಡು ಜೋಡಿ ಶ್ರುತಿ ಆಗ್ತಿತ್ತು, ಒಂದು ಚೌಡಿಕಿ ಆಗ್ತಿತ್ತು. ತಳಗಿನ ಬುಡ ಶ್ರುತಿ ಆದ್ರೆ, ಮ್ಯಾಗಿನ ಭಾಗ ಚೌಡಿಕಿ ಆಗ್ತಿತ್ತು. ಒಂದೇ ಮರದಿಂದ ಇವೆಲ್ಲ ವಾದ್ಯಗಳು ಆಗ್ತಿದ್ವು. ಈ ಚೌಡಿಕಿ ಮಾಡ್ಬೇಕಂದ್ರ ಮಾದಿಗ್ರು ಮನಿಗೋಗಿ ಚರ್ಮ ತಗೊತಿದ್ರು... ನೋಡಿ, ಈ ಪ್ರತಿಯೊಂದು ಹಂತಾನೂ ಒಂದಿಡೀ ಸಮುದಾಯನ ಒಂದಿಲ್ಲೊಂದು ರೀತಿನಾಗ ಬೆಸೆದಿತ್ತು. ಇದು ಈಗ ಕೈಗಾರಿಕೆ ಆಗ್ಬಿಟ್ಟದ. ನಾನು ಮೀರಜ್‌ಗೆ ಹೋಗಿ ಅಂಗಡಿಯವ್ನ ಜೊತಿಗಿ ವ್ಯಾಪಾರ ಮಾಡ್ತೀನಿ. ಇದು ಪೂರ್ತ ಬೇರೇನೆ ಆಗೋಯ್ತು. ಇದ್ನ ಹೇಳೋ ಮೂಲ್ಕ ನಾನು ಹಿಂದೆ ಏನಿತ್ತು ಅದೆಲ್ಲ ಉಳಿಬೇಕು ಅಂತ ಹೇಳ್ತಾ ಇಲ್ಲ. ಆದ್ರ, ಒಂದು ಬದಲಾವಣೇನ ರೆಕಾರ್ಡ್ ಮಾಡ್ತಾ ಹೋದಾಗ ಇವನ್ನೂ ಅರ್ಥ ಮಾಡ್ಕೊಬೇಕು... ನಮ್ ಬದ್ಕು ಪೂರ್ತ ವಿರೋಧಾಭಾಸಗಳೇ ಅದಾವ... ಪ್ರತಿದಿನ ನಾನು ಅರ್ಥ ಮಾಡ್ಕೊಬೇಕಾದ ಪ್ರಶ್ನೆ ಏನು ಗೊತ್ತ... ನಾನು ಮಾಡ್ತಾ ಇರೋ ಕೆಲ್ಸದ ಪ್ರತಿ ಸಂದರ್ಭದಲ್ಲೂ ನಾನು ಎಷ್ಟರಮಟ್ಟಿಗೆ ಹೊರ್ಗಿನವಳು ಅಥವಾ ಒಳಗಿನವಳು ಅಂತ. ನಂಗೆ ಪೂರ್ತಾ ಕನ್ನಡನೂ ಬರತ್ತೆ ಅನ್ನೋ ಹಾಂಗಿಲ್ಲ, ಪೂರ್ತ ಇಂಗ್ಲಿಷು ಅನ್ನಾಂಗಿಲ್ಲ, ಇಲ್ಲಿ ಹುಟ್ಟೀನಿ ಆದ್ರ ಇಲ್ಲಿಯವಳಾ ಗೊತ್ತಿಲ್ಲ. ಅಂದ್ರ ನಾ ಏನು ಹೇಳಾಕ ಹೊಂಟಿನಿ ಅಂದ್ರ, ನನ್ನೊಳಗಿನ ಧೈರ್ಯ ಅದಲ್ಲ... ಅದು ನಂಗೆ ಬಂದಿರಾದು ನಾ ಓದಿದ ಕಾನ್ವೆಂಟ್ ಓದಿನ ಹಿನ್ನೆಲಿಯೊಳಗಿಂದ, ನಾ ಯಾವ್ದಕ್ಕೂ ಸೋಲಾಂಗಿಲ್ಲ ಅನ್ನೋ ಧೈರ್ಯ ತುಂಬ್ತಲ್ಲ ಕ್ಯಾಥಲಿಕ್ ವಾತಾವರಣ... ಇದು ಯಾವತ್ತೂ ನನ್ನ 'ಐಡೆಂಟಿಟಿ' ಭಾಗ ಆಗಿರ್ತದ... ಇದು ನಂಗೆ ಸಿಕ್ಕ ದೊಡ್ಡ ಅವಕಾಶ, ಸೌಕರ್ಯ. ನನ್ನ ಕುಟುಂಬದ ಹಿರಿಯರಿಗೆ ಇಂಥ ಅವಕಾಶ ಇರ್ಲಿಲ್ಲ... ನಮ್ ಬದುಕ್ನಾಗೆ ಜಾತಿ ಪಾತ್ರ ದೊಡ್ಡದದ, ಮೀಸಲಾತಿನ ಇನ್ನಾ ನೂರಾರು ವರ್ಷ ಕೊಟ್ರೂ ಈ ಸಮಸ್ಯಿ ಬಗೆಹರಿಯಾಂಗಿಲ್ಲ, ಅದು ಸಮಾಜದಲ್ಲಿ ಅಷ್ಟು ಬೆರೆತು ಹೋಗ್ಯದ. ಜಾತಿ ಹೋಗ್ಬೇಕು ಅಂತ ಹೇಳಾವ್ರು ಕೂಡ ಎಷ್ಟರಮಟ್ಟಿಗಿ ಅದನ್ನ ತಮ್ ಬದುಕಿನೊಳಗ ತಗೊಂಡಾರೋ ಗೊತ್ತಿಲ್ಲ, ದಿಗಿಲಾಗ್ತದ ಇದನ್ನ ನೋಡ್ತಾ ಇದ್ರ...

◆ **...ಇದರ ಮೂಲಕ ನೀವು ವ್ಯಕ್ತಿ ಮತ್ತು**